# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಅಲೆಮಾರಿ ಜನಾಂಗದ ಭೂ ಖರೀದಿ ಯೋಜನೆಯಲ್ಲಿ ಘಟಕ ವೆಚ್ಚ ನಿಗಧಿಪಡಿಸುವ ಬಗ್ಗೆ

**ಓದಲಾಗಿದೆ:-** 1) ಸರ್ಕಾರಿ ಆದೇಶ ಸಂಖ್ಯೆ: ಸಕಇ/80/ಎಸ್.ಡಿ.ಸಿ/2007, ದಿನಾಂಕ: 05/08/2009

2) ಪತ್ರ ಸಂಖ್ಯೆ: ದೇಹಿನಿ/ಸಮನ್ವಯ/ಅ/ಭೂಖ/ಸಿಆರ್-/2009-10, ದಿನಾಂಕ: 22/03/2010

* * * * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕ ವೆಚ್ಚದ ಗರಿಷ್ಟ ಮಿತಿ 2.50 ಲಕ್ಷ ರೂಗಳನ್ನು ಮೀರದಂತೆ ಖರೀದಿಸಲು ಈ ನೋಂದಾಯಿತ ಬೆಲೆಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಪ್ರಕರಣಗಳಿಗೆ ಕಂದಾಯ ಇಲಾಖೆಯ ಅನುಮೋದನೆ ಪಡೆಯಲು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ನಿಗದಿಪಡಿಸಿರುವ ಘಟಕ ವೆಚ್ಚವನ್ನು ಅಲೆಮಾರಿ ಜನಾಂಗದ ಭೂ ಖರೀದಿ ಯೋಜನೆಯ ಅಲೆಮಾರಿ ಜನಾಂಗದವರಿಗೂ ನಿಗಧಿಪಡಿಸುವಂತೆ ಪ್ರಸ್ತಾಪಿಸಿರುತ್ತಾರೆ.

ಅದರಂತೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 121 ಬಿಎಂಎಸ್ 2010**
**ದಿನಾಂಕ: 14-07-2010**

ಅಲೆಮಾರಿ ಜನಾಂಗದ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕ ವೆಚ್ಚದ ಗರಿಷ್ಟ ಮಿತಿ 2.50 ಲಕ್ಷ ರೂಗಳನ್ನು ಮೀರದಂತೆ ಖರೀದಿಸಲು ಮಂಜೂರಾತಿ ನೀಡಿದೆ. ಹಾಗೂ ಈ ಮೊತ್ತಕ್ಕಿಂತ ಹೆಚ್ಚಾದಲ್ಲಿ ಅಂತಹ ಪ್ರಕರಣಗಳನ್ನು ಕಂದಾಯ ಇಲಾಖೆಯ ಅನುಮೋದನೆ ಪಡೆಯಲು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಭೂ ಒಡೆತನ ಯೋಜನೆಯ ಇತರೆ ಷರತ್ತುಗಳು ಈ ಹಿಂದೆ ಇದ್ದಂತೆ ಮುಂದುವರಿಯುತ್ತದೆ.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ.

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಪ್ರತಿಯನ್ನು:-**

1. ಮಹಾಲೇಖಪಾಲಕರು (ಎ ಮತ್ತು ಇ, ಪರಿಶೋಧನೆ-1 ಮತ್ತು ಲೆಕ್ಕ ಪರಿಶೋಧನೆ-2) ಕರ್ನಾಟಕ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ (ಡಿ.ದೇವರಾಜ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ., ಬೆಂಗಳೂರು ಇವರ ಮುಖಾಂತರ)
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ